ಹಿರಿಯ **ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,** ನಾಗಮಂಗಲ.

**ಸಿ ಸಿ ನಂಃ 240/2018**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಕಾರ್ತಿಕ್ ಟಿ. | **ದಿನಾಂಕ** | ಃ | **05-04-2025** |
| **ತಂದೆಯ ಹೆಸರು** | ಃ | ಪುಟ್ಟರಾಜು | **ಪಿ ಡಬ್ಲ್ಯೂ** | ಃ | **02** |
| **ವಯಸ್ಸು** | ಃ | **31 ವರ್ಷ** | | | |
| **ಉದ್ಯೋಗ** | ಃ | ಸಹಾಯಕ ವ್ಯವಸ್ಥಾಪಕರು | | | |
| **ವಿಳಾಸ** | ಃ | ಎಸ್.ಬಿ.ಐ. ನಾಗಮಂಗಲ ಶಾಖೆ | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ-** ಶ್ರೀ. ಹೆಚ್. ಹೆಚ್. ವಕೀಲರಿಂದ

ಖಾತೆ ಸಂಖ್ಯೆಃ 54026777850 ಯು ರಾಮಣ್ಣ ಡಿ. ಬಿನ್ ರಾಮಯ್ಯ ಸಿ. ದಂಡಿಗಹಳ್ಳಿ ರವರಿಗೆ ಸೇರಿರುತ್ತದೆ. ಇವರು 1986 ರಲ್ಲಿ ಎಸ್. ಬಿ. ಎಂ. ಬ್ಯಾಂಕ್ ನಲ್ಲಿ ಖಾತೆ ತೆರೆದಿರುತ್ತಾರೆ. ಸದರಿ ಬ್ಯಾಂಕ್ 2016 ರಲ್ಲಿ ನಮ್ಮ ಬ್ಯಾಂಕ್ ಗೆ ವಿಲೀನವಾಗಿದೆ. 19-10-2012 ರವರೆಗೆ ಮಾತ್ರ ಅವರು ಬ್ಯಾಂಕ್ ನಲ್ಲಿ ವ್ಯವಹಾರ ಮಾಡಿರುತ್ತಾರೆ. ನಿಪಿ.1 ಮೇಲೆ ಹೇಳಿದ ಖಾತೆಗೆ ಕೊಟ್ಟಿರುತ್ತಾರೆ. 2012 ರ ನಂತರ ಅವರ ಖಾತೆ ನಿಷ್ಕ್ರಿಯಗೊಂಡಿರುತ್ತದೆ. ಅವರು ಕೆ. ವೈ. ಸಿ. ನವೀಕರಿಸದ ಕಾರಣ ಅವರ ಖಾತೆ ಮುಂದುವರೆದಿರುವುದಿಲ್ಲ. ಅವರು 1986 ರಲ್ಲಿ ಖಾತೆ ತೆರೆದಿದ್ದು ಮೂಲ ದಾಖಲಾತಿಗಳು ನಮ್ಮ ಬ್ಯಾಂಕ್ ನಲ್ಲಿ ಇಲ್ಲ. ರಾಮಣ್ಣ ರವರ ಖಾತೆಗೆ ಸಂಬಂಧಿಸಿದಂತೆ ಅಕೌಂಟ್ ಸ್ಟೇಟ್ ಮೆಂಟ್, ಅವರ ಮಾದರಿ ಸಹಿ ಮತ್ತು ಫೋಟೋ ಕಂಪ್ಯೂಟರ್ ನಲ್ಲಿ ಅಪ್ ಲೋಡ್ ಆಗಿರುವ ಪ್ರತಿ ಹಾಗೂ ಅವರು ವ್ಯವಹಾರ ಮಾಡಿರುವ ಎರಡು ಚೆಕ್ ನ ದೃಢೀಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.6 ರಿಂದ 9 ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಹಿ. ಸಿ. ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು

ನಾಗಮಂಗಲ.